



ಗಿರಿಯ ಉತ್ತುಂಗದತ್ತ



ಹಜರತ್ ದಾದಾ ಹಯಾತ್ ಖಲಂದರ್ ದರ್ಗಾ

ಅತ್ಯಂತ ಎತ್ತರದ ಶಿಖರವೆಂಬ ಹೆಗ್ಗಳಿಕೆ ಗಳಿಸಿದೆ! ಈ ಶಿಖರಗಳ ಮಧ್ಯೆ ಉತ್ಸಾಹಿಗಳಿಗಾಗಿ ಟ್ರೆಕ್ಕಿಂಗ್ ವ್ಯವಸ್ಥೆಯೂ ಇದೆ.

ಬಾಬಾ ಬುಡನ್ ಗಿರಿಯ ಮೇಲೆ ಸೂಫಿ ಸಂತ ಹಜ್ರತ್ ದಾದಾ ಹಯಾತ್ ಖಲಂದರ್‌ರವರ ದರ್ಗಾ ಮತ್ತು ದತ್ತಾತ್ರೇಯ ಸ್ವಾಮಿಯ ದತ್ತಪೀಠಗಳಿದ್ದು ಸೌಹಾರ್ದತೆ ಪ್ರತೀಕದಂತಿವೆ. ಗುರು ದತ್ತಾತ್ರೇಯ ಸ್ವಾಮಿ ಮತ್ತು ಸಂತ ಹಜರತ್ ದಾದಾ ಹಯಾತ್ ಖಲಂದರ್ ನೆಲೆಸಿದ್ದ ಗುಹೆಯೂ ಇಲ್ಲಿನ ಆಕರ್ಷಣೆ! ಬಾಬಾ ಬುಡನ್ ಗಿರಿ ಶ್ರೇಣಿಯಲ್ಲೇ ದೇಶದಲ್ಲಿ ಪ್ರಪ್ರಥಮ ಬಾರಿಗೆ ಕ್ರಿ.ಶ. 1670 ಕಾಫಿ ಬೆಳೆ ಬೆಳೆಸಲಾಯಿತು. ಸೂಫಿ ಸಂತ ಬಾಬಾ ಬುಡನ್ ಅವರು ಯೆಮೆನ್ ದೇಶದಿಂದ ಕಾಫಿ ಬೀಜಗಳನ್ನು ತಂದು ಬೆಳೆಸಿದ್ದು ಇತಿಹಾಸ.

ಈಗ ಚಿಕ್ಕಮಗಳೂರಿನಾದ್ಯಂತ ಕಾಫಿ ಎಸ್ಟೇಟ್‌ಗಳಿದ್ದು ಈ ಗಿರಿ ಶಿಖರಗಳ ದಾರಿಯ ಇಕ್ಕೆಲಗಳಲ್ಲೂ ಅಚ್ಚುಕಟ್ಟಾದ ತೋಟಗಳನ್ನು ಕಾಣಬಹುದು. ಇವುಗಳ ನಡುವೆ ನೆರಳಿಗಾಗಿ ಉದ್ದುದ್ದದ ಸಿಲ್ವರ್ ವೃಕ್ಷಗಳನ್ನೂ ಹಣ್ಣಿಗಾಗಿ ಕಿತ್ತಳೆ ಮರಗಳನ್ನೂ ನೆಟ್ಟಿದ್ದು ಮನಸೂರೆಗೊಳ್ಳುವಂಥದು.

ಚಿಕ್ಕಮಗಳೂರಿನಿಂದ ಉತ್ತರಕ್ಕೆ 14. ಕಿ.ಮೀ. ಕ್ರಮಿಸಿದ ಬಳಿಕ ಎಡಕ್ಕೆ 8 ಕಿ.ಮೀ. ಸಾಗಿದರೆ ಮುಳ್ಳಯ್ಯನಗಿರಿ ಹಾಗೂ ಬಲಕ್ಕೆ 17 ಕಿ.ಮೀ. ದೂರದಲ್ಲಿ ಬಾಬಾ ಬುಡನ್ ಗಿರಿ ಶಿಖರಗಳನ್ನು ತಲುಪಬಹುದು. ಮುಳ್ಳಯ್ಯನಗಿರಿಯ ಮಾರ್ಗಮಧ್ಯೆ ನೀರು ತುಂಬಿ ಗಮನ ಸೆಳೆಯುವ ಹಿರೇಕೊಳ್ಳೆ ಕೆರೆ ನೋಡ–ಬಹುದು. ರಸ್ತೆ ಕಡಿದಾಗಿದ್ದು ಅಲ್ಲಲ್ಲಿ ಹೊಂಡಬಿದ್ದು ಅಪಾಯಕಾರಿಯಾಗಿವೆ, ರಸ್ತೆಗುಂಟ ನೀರಿನ ಝರಿಗಳು ಕಾಣ ಸಿಗುತ್ತವೆ.

ಸುಮಾರು ಒಂದು ಗಂಟೆಯ ಪಯಣದ ಬಳಿಕ ನಾನು ಮುಳ್ಳಯ್ಯನ ಗಿರಿಶಿಖರ ದ್ವಾರ ತಲುಪಿದೆ. ಅಲ್ಲಿಂದ ಮುಂದೆ ವಾಹನ ಸಂಚಾರ ಮಾಡು–ವಂತಿಲ್ಲ. ಆಗ ಸಂಜೆ ನಾಲ್ಕೂವರೆಯಾಗಿದ್ದರೂ ಕವಿದ ಮೋಡ ಮತ್ತು ಮುಸುಕಿದ ಮಂಜಿನಿಂದಾಗಿ ರಾತ್ರಿ ಏಳರ ಕತ್ತಲೆ ಅಲ್ಲಿ ಮನೆ ಮಾಡಿತ್ತು! ಬೀಸುವ ಕುಳಿರ್ಗಾಳಿಗೆ ಮೈ ಥರಗುಟ್ಟುತ್ತಿದ್ದರೂ ನಾಡಿನ ಅಗ್ರ ಶಿಖರದ ಮೇಲೇರಿದ ಉತ್ಸಾಹದಿಂದ ಮನ ಉಲ್ಲಸಿತವಾಗಿತ್ತು.

ಅಲ್ಲಿಂದ ಮೇಲೆ ಸುಮಾರು 1100 ಮೆಟ್ಟಿಲುಗಳನ್ನೇರಿದರೆ ತುತ್ತ ತುದಿ–ಯಲ್ಲಿ ಅಸ್ತಿತ್ವದಲ್ಲಿರುವ ಶ್ರೀ ಮೇಲು ಗದ್ದಿಗೆ ಮುಳ್ಳಪ್ಪ ಸ್ವಾಮಿ ಮಠ ತಲುಪ–ಬಹುದು. ಆ ಮಠದ ಆಧಿಪತ್ಯದಲ್ಲಿರುವ ಗೋವುಗಳು ಮೇಯುವುದನ್ನೂ ಕಾಣಬಹುದು. ನಾನು ಕೆಲವು ಮೆಟ್ಟಿಲುಗಳನ್ನು ಏರಿದರೂ ಕಾಡುವ ಮೊಣಕಾಲು ನೋವಿನ ಕಾರಣವಾಗಿ ಎಲ್ಲ ಮೆಟ್ಟಿಲುಗಳನ್ನು ಏರಲಾಗಲಿಲ್ಲ.

ಪರ್ವತ ಶಿಖರದೆತ್ತರದಿಂದ ಕಾಣ ಸಿಗುವ ಸುತ್ತಲಿನ ಬೆಟ್ಟಗಳ ಕೆಳಗಿನ ಹಳ್ಳಿ, ಪಟ್ಟಣಗಳ ವಿಹಂಗಮ ನೋಟವನ್ನು ಆಸ್ವಾದಿಸಲು ಅಲ್ಲಿಂದ ಸಂಪೂರ್ಣ ಸಾಧ್ಯವಾಗಿತ್ತು! ಮೇಲೆ ಕತ್ತಲಿನ ಅಸ್ಪಷ್ಟತೆಯಿದ್ದರೂ ಕೆಳಗೆ ಬಿಸಿಲಿನಲ್ಲಿ ಚಿಕ್ಕಮಗಳೂರು ಹೊನಲು ಬೆಳಕಿನ ಕ್ರಿಕೆಟ್ ಕ್ರೀಡಾಂಗಣದಂತೆ ಗೋಚರಿಸುತ್ತಿತ್ತು. ಸುಯ್ಯೆಂದು ಬೀಸುವ ಮಾರುತನಲೆಗೆ ಮಂಜಿನ ಗುಂಪು ಚಲಿಸಿದಾಗ ಅಂಕದ ಪರದೆ ಸರಿದಂತೆ ಪರ್ವತದುತ್ತುಂಗದ ದೃಶ್ಯ ನಿಚ್ಚಳ–ವಾಗುತ್ತಿತ್ತು. ನಂತರ ಪುನಃ ಕವಿಯುತ್ತಿದ್ದ ಮುಗಿಲಿನ ಮೇಘಮಾಲೆಯ ಕಣ್ಣಾ ಮುಚ್ಚಾಲೆಯಾಟವನ್ನು ಗಮನಿಸುವುದೇ ಒಂದು ಅನಿರ್ವಚನೀಯ ಆನಂದಾನುಭವ.